Literacy for a Billion

Movie: Kalleshi Malleshi
Year: 2008

Song: Maamarada Kogileye Chaitra
Lyricist:

ಮಾಮರದ ಕೋಗಿಲೆಯೆ
ಚೈತ್ರ ಬಂತೆ ಕೇಳು
ನಿನ ವರನಾಗಿ ಬರುವೆನು
ನಾ ಎಂದು ಬರಲಿ ಹೇಳು
ಮಾಮರದ ಕೋಗಿಲೆಯೆ
ಚೈತ್ರ ಬಂತೆ ಕೇಳು
ನಿನ ವಧುವಾಗಿ ಬರುವೆನು
ನಾ ಎಂದು ಬರಲಿ ಹೇಳು
ಮತ್ತು ತರುವ ಹೆಣ್ಣಿಂದೆ
ಸುತ್ತಿ ಬರುವೆನು ನಿನ ಹಿಂದೆ
ಮುದ್ದು ಮಾಡೋ ಗಂಡೆಂದೆ
ಸುತ್ತಿ ಬಂದೆ ನಿನ ಹಿಂದೆ
ಮಾಮರದ ಕೋಗಿಲೆಯೆ
ಚೈತ್ರ ಬಂತೆ ಕೇಳು
ನಿನ ವಧುವಾಗಿ ಬರುವೆನು
ನಾ ಎಂದು ಬರಲಿ ಹೇಳು

ಮಲೆನಾಡ ಮೋಡಗಳ
ಹತ್ತಿ ಬಂದೆ ನಿನಗಾಗಿ
ಸುತ್ತೇಳು ರಾಜ್ಯಗಳ
ಸುತ್ತಿ ಬಂದೆ ನಿನಗಾಗಿ
ಸೂರ್ಯನೆಡೆ ತಿರುಗುವಂಥ
ಸೂರ್ಯಕಾಂತಿ ಹೂ ರೀತಿ
ನಿನ ಹಿಂದೆ ನಾ ಬರುವೆ
ತೋರು ನಿನ ಆ ಪ್ರೀತಿ

ನೀನಿರಲು ಜೊತೆಯಲ್ಲಿ
ಸ್ವರ್ಗ ನನ ಬಳಿಯಲ್ಲಿ
ಕಣ್ಣ ಮುಚ್ಚಿ ತುಟಿಯಲ್ಲಿ
ಕೊಡು ಮುತ್ತು ಪ್ರೀತಿಯಲಿ
ನಿನ ನೀಳ ತೋಳುಗಳು
ನನ ಅಪ್ಪಿ ಬಳಸಿರಲಿ
ಮುದ್ದು ಮುದ್ದು ಹೆಚ್ಚಾಗಿ
ಪ್ರೀತಿ ಎಂದೂ ನೆಲೆಸಿರಲಿ
ಬಳಿಗೆ ಬಾರೆ ಭಾಗ್ಯನಿಧಿ
ತುಳಿಯುವ ನಾವ್ ಸಪ್ತಪದಿ
ತುಳಿಯುವ ನಾವ್ ಸಪ್ತಪದಿ
ಮಾಮರದ ಕೋಗಿಲೆಯೆ
ಚೈತ್ರ ಬಂತೆ ಕೇಳು
ನಿನ ವರನಾಗಿ ಬರುವೆನು
ನಾ ಎಂದು ಬರಲಿ ಹೇಳು

ಶಂಕೆ ಏತಕೆ ಚೆಲುವ
ನಿನಗಿನೂ ನನಲ್ಲಿ
ಅಂಕುರಿಸಿ ಅರಳಿರಲು
ಒಲವೆಂಬ ಹೂ ಬಳ್ಳಿ
ಕಾರ್ಮೋಡದ ಮುಗಿಲಲಿ
ಮಿಂಚು ಬಂತೆ ಕೋಲ್ಮಿಂಚು
ನಗೆಯಿರಲಿ ಮುಖದಲಿ
ಅರಳಲಿ ಆ ತುಟಿಯಂಚು
ನಿನೆಗಳ ಆ ನೆನಪಲ್ಲಿ

Literacy for a Billion

ನಾಳೆಗಳನು ಕಟ್ಟೋಣ
ಬಾಳೆಲ್ಲ ಮರೆತೆಲ್ಲ
ನಮ್ಮ ಗುರಿಯ ಮುಟ್ಟೋಣ
ಒಲವು ಮೂಡದು ಚೆಲುವೆ
ಕಂಡ ಕಂಡವರ ಮೇಲೆ
ಮೂಡಿಹುದು ನಿನ ಮೇಲೆ
ಪೂರ್ವ ಜನ್ಮದ ಮಾಲೆ
ಪ್ರೇಮ ಭರಿತ ಬಾಳು ಸೊಗಸು
ಜೀವನ ಮಾವು ಹಲಸು
ಜೀವನ ಮಾವು ಹಲಸು
ಮಾಮರದ ಕೋಗಿಲೆಯೆ
ಚೈತ್ರ ಬಂತೆ ಕೇಳು
ನಿನ ವರನಾಗಿ ಬರುವೆನು

ನಾ ಎಂದು ಬರಲಿ ಹೇಳು
ಮಾಮರದ ಕೋಗಿಲೆಯೆ
ಚೈತ್ರ ಬಂತು ಕೇಳು
ನಿನ ವಧುವಾಗಿ ಬರುವೆನು
ನಾ ಎಂದು ಬರಲಿ ಹೇಳು
ಮತ್ತು ತರುವ ಹೆಣ್ಣಿಂದೆ
ಸುತ್ತಿ ಬರುವೆನು ನಿನ ಹಿಂದೆ
ಮುದ್ದು ಮಾಡೋ ಗಂಡೆಂದೆ
ಸುತ್ತಿ ಬಂದೆ ನಿನ ಹಿಂದೆ
ಮಾಮರದ ಕೋಗಿಲೆಯೆ
ಚೈತ್ರ ಬಂತೆ ಕೇಳು
ನಿನ ವಧುವಾಗಿ ಬರುವೆನು
ನಾ ಎಂದು ಬರಲಿ ಹೇಳು

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.